ಮೇಳ ಬಿಟ್ಟ. ಆಮೇಲೆ ಯೆಲ್ಲಿ ಹೋದ ಅಂತ ಇಲ್ಲ. ಕುದ್ರೆಬೆಟ್ಟು ಮೇಳದಲ್ಲಿ ಆ ವರ್ಷ ಭಾರೀ ಬದಲಾವಣೆಗಳಾದವು. ಜಬ್ಬಾಗಿದ್ದ(ಮುದುಕರಾಗಿದ್ದ) ಹಿಮ್ಮೇಳದ ಕಲಾವಿದರನ್ನು ಯೆಜಮಾನ್ರು ಬದಲಾಯಿಸಿದ್ರು. ಹೀಗಾಗಿ ಶಂಕರ ಸಾ ಮದ್ದಲೆ ವಾದಕನಾಗಿ ಮುಂದುವರೀಲಿಲ್ಲ. ಪುರಾಣದ ಪ್ರಸಂಗಗಳ ಬದಲು ಹೊಸ ಕಾಲ್ಪನಿಕ ಪ್ರಸಂಗಗಳು ಬಂದವು. ಆ ವರ್ಷ ದಿವ್ಯ ತಾನು ಸಾ ಮೇಳ ಸೇರ್ತೇನೆ ಅಂತ ಹಟ ಹಿಡಿದಳು. ಆದ್ರೆ ಅಷ್ಟು ಹೊತ್ತಿಗೆ ಅವಳನ್ನು ಮೀರಿಸುವ ಇಬ್ಬರು ಮೂವರು ಹುಡುಗಿಯರು ರೆಡಿಯಾಗಿದ್ರು. 'ಯೆಜಮಾನ್ರೇ ನಾನು ಈ ಸರ್ತಿ ಮೇಳ ಸೇರಬೇಕು ಅಂತ ಮಾಡಿದ್ದೇನೆ' ಅಂತ ಅವಳು ಹೇಳಿ ಬಾಯಿ ಮುಚ್ಚುವುದರೊಳಗೆ, 'ನಿಂಗೆ ಪ್ರಾಯ ಆಯ್ತುಲ್ವಾ? ನಿನ್ನ ವೇಷಕ್ಕಿಂತ ಇವರದ್ದು ಚೆಂದ ಆಗ್ತದೆ' ಅಂತ ಅವಳನ್ನು ಪುಸ್ಕು ಮಾಡಿದ್ರು. 'ಎಲ್ಲಿಯಾದ್ರೂ ವಿಶೇಷ ಆಟ ಇದ್ರೆ ಕರೀತೇನೆ ಆಯ್ತಾ? ಹಿಂದೆ ಕೊಟ್ಟ ಹಾಗೆ ದುಡ್ಡು ಕೊಡ್ಲಿಕ್ಕೆ ಆಗೂದಿಲ್ಲ ಆಯ್ತಾ? ಯೇನಾ ಐನೂರಾ ಏಳುನೂರಾ ಕೊಡ್ಬಹುದು ಆಯ್ತಾ?' ಅಂತ ಹೊಟ್ಟೆಯ ಮೇಲೆ ಕೈ ಆಡಿಸ್ತಾ ಹೇಳಿದಾಗ ಅವಳಿಗೆ ಅಸಯ್ಯ ಆಯ್ತು. ಮಾಧವ ಸಾ 'ನಾನು ಒಬ್ನೇ ದುಡಿದ್ರೆ ಸಾಕು. ನೀನು ಸಾ ಆರೋಗ್ಯ ಹಾಳು ಮಾಡಿಕೊಳ್ಳುದು ಬೇಡ. ಈಗ ನಿನ್ನ ಮಂಡೆ ಹಾಳಾಗಿದೆ. ಅದೇ ಸಾಕು' ಅಂತ ಹೇಳಿ ಬಾಯಿ ಮುಚ್ಚಿದ್ದಷ್ಟೇ ಗೊತ್ತು, 'ಹೌದೌದು ನಂಗೆ ಮಂಡೆ ಹಾಳಾಗಿದೆ ಅಲ್ವಾ!? ನಂಗೆ ಬಿಂಗ್ರಿ ಅಲ್ವಾ!? ಹೊಟ್ಟೆಯಲ್ಲಿ ಒಂದು ಹುಳ ಅಂತ ಹುಟ್ಟುತ್ತಿದ್ರೆ ಇಷ್ಟು ಹಾಳಾಗ್ತಾ ಇರ್ಲಿಲ್ಲ ನನ್ನ ಮಂಡೆ' ಅಂತೆಲ್ಲ ಕೂಗಾಡಿ ಬೊಬ್ಬೆ ಹೊಡೆದು ಎಲ್ಲ ಮಾಡಿದ್ಲು. ಮಾತ್ರ ಅಲ್ಲ 'ಇನ್ನು ನನ್ನ ಸುದ್ದಿಗೆ ಬಂದ್ರೆ ನೋಡಿ. ನನ್ನ ಪಾಡಿಗೆ ನಾನು ಇರ್ತೇನೆ. ನಿಮ್ಮ ಪಾಡಿಗೆ ನೀವು ಇದ್ರೆ ಸರಿ. ಇಲ್ಲಾಂತಾದ್ರೆ...' ಅಂತ ತಲೆಕೂದಲೆಲ್ಲ ಕೆದರಿಕೊಂಡು ಭೀಷ್ಮನಿಗೆ ಶಾಪ ಕೊಡುವ ಅಂಬೆಯ ಹಾಗೆ, ದಕ್ಷನನ್ನು ನಿಂದಿಸುವ ದಾಕ್ಷಾಯನಿಯ ಹಾಗೆ ಕಂಡು ಬಂದಳು. ಯೆಜಮಾನರ ಎದುರು ಮರ್ಯಾದಿ ಹೋದ ಮಾಧವ ತಲೆತಗ್ಗಿಸಿದ. 'ಆಯ್ತು ಮಾರಾಯ್ತೀ... ಇನ್ನು ನಿನ್ನ ಸುದ್ದಿಗೆ ನಾನು ಬರೂದಿಲ್ಲ. ಒಮ್ಮೆ ಇಲ್ಲಿಂದ ಹೋಗುವ' ಅಂತ ಹೇಳಿದವನೆ ಅವಳ ಕೈ ಹಿಡೀಲಿಕ್ಕೆ ಅಂತ ಮುಂದಾದ. ಆಗ ಅವಳು 'ಮುಟ್ಟಿದ್ರೆ ಜಾಗ್ರತೆ!' ಅಂತ ಹೂಂಕರಿಸಿದ್ಲು.

ಅಲ್ಲಿಂದ ಮುಂದೆ ಒಂದೆರಡು ವರ್ಷ ಮಾಧವನದ್ದು ಒಂದು ಮುಖ. ಅವಳದ್ದು ಒಂದು ಮುಖ ಆಯ್ತು.

ಆ ವರ್ಷ ಮಾಧವನಿಗೆ ಮಳೆಗಾಲದಲ್ಲಿ ಬೊಂಬಾಯಿಯಲ್ಲಿ ಆಟದ್ದು ಕಾಂಟ್ರ್ಯಾಕ್ಟ್ ಸಿಕ್ಕಿತು. ಆ ತಿರುಗಾಟ ಮುಗಿಸಿ ವಾಪಾಸ್ ಮನೆಗೆ ಬರುವಾಗ ಅವನಿಗೆ ಮನೆಯಲ್ಲಿ ಒಂದು ವಿಚಿತ್ರ ಕಾಣಲಿಕ್ಕೆ ಸಿಕ್ಕಿತು. ಮನೆ ತುಂಬ ಆಟಿಕೆ ಸಾಮಾನಿನ ಹಲ್ಲಿಗಳು. ದೊಡ್ಡದು ಚಿಕ್ಕದು ಬೇರೆ ಬೇರೆ ಬಣ್ಣದವು ಹೀಗೆ ಅಲ್ಲಲ್ಲಿ ಇದ್ದವು. 'ಇಶ್ಶಿ ಇದು ಯೆಂತ ಗಲೀಜು ಆಟಿಕೆ ಸಾಮಾನಿನ ಹಲ್ಲಿಗಳು? ಯೆಂತಕ್ಕೆ ಇವುಗಳನ್ನು ತಂದು ಹಾಕಿದ್ದು?' ಅಂತ ಅಸಯ್ಯದ ಮುಖ ಮಾಡಿಕೊಂಡು ಕೇಳಿದ. ಅವನಿಗೆ ಚಿಕ್ಕ ಇದ್ದಾಗಿನಿಂದ್ಲೂ ಹಲ್ಲಿ ಕಂಡ್ರೆ ಭಾರೀ ಹೆದರಿಕೆ. ಚಿಕ್ಕ ಇದ್ದಾಗ ಒಂದು ಸರ್ತಿ ಹಲ್ಲಿ ಅವನ ಮೈಮೇಲೆ ಬಿದ್ದು ಮೇಲಿಂದ ಕೆಳಗಿನ ತಂಕ ಹರಿದು ಹೋಗಿತ್ತು. ಆಗ ಹೆದರಿ ಚಡ್ಡಿಯಲ್ಲೇ ಒಂದಕ್ಕೆ ಮಾಡಿಕೊಂಡಿದ್ದ. ಮತ್ತೊಂದು ಸರ್ತಿ ಶಾಲೆಯಲ್ಲಿ ಕೊಟ್ಟಿದ್ದ ಉಪ್ಪಿಟ್ಟಿನಲ್ಲಿ ಹಲ್ಲಿ ಬಿದ್ದು ಎಲ್ಲರೂ ವಾಂತಿ ಮಾಡಿಕೊಂಡಿದ್ರು. ಹೀಗಾಗಿ ಅವನಿಗೆ ಹಲ್ಲಿ ಕಂಡ್ರೆ ಆಗ್ತಾ ಇರ್ಲಿಲ್ಲ. 'ಯೆಂತಕ್ಕೆ ಅಂದ್ರೆ? ನಂಗೆ ಬೇಕು ಅದಕ್ಕೇ. ನಿಮಿಗೆ ಯೆಂತಕ್ಕೆ ಮಂಡೆಬಿಸಿ?' ಅಂತ ಕೇಳಿದ್ಲು. ಮಾತ್ರ ಅಲ್ಲ ಮನೆಯಲ್ಲಿ ಅವ ಸ್ನಾನಕ್ಕೆ ಹೋದಾಗಲೋ, ಮಲಗಲಿಕ್ಕೆ ಹೋದಾಗಲೋ ಗೋಡೆಯ ಮೇಲೆ